**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಸಿಸಿ ನಂಃ 38/2024</u>**

| | | |
|---|---|---|
| ಹೆಸರು | ಜ್ಯೋತಿ | ಸಿ.ಡಬ್ಲ್ಯೂ 1 |
| ಗಂಡನ ಹೆಸರು | ರವಿ | ಪಿ.ಡಬ್ಲ್ಯೂ 1 |
| ವಯಸ್ಸು | 35 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಹೊಸಹೆಮ್ಮಿಗೆ ಗ್ರಾಮ | |

ಸಾಕ್ಷಿಗೆ ದಿನಾಂಕಃ 09.04.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ ಃ</u>**

ಚಾ.ಸಾ. 2 ರಿಂದ 9 ರವರ ಪರಿಚಯವಿದೆ. ಮೃತ ರವಿ ನನ್ನ ಪತಿ. ದಿನಾಂಕ 03.03.2024 ರಂದು ನನ್ನ ಪತಿಯು ಬೆಂಗಳೂರಿನ ಕೃಷಿಮೇಳಕ್ಕೆ ಹೋಗುವುದಾಗಿ ಹೇಳಿ ಬೆಳಿಗ್ಗೆ ಮನೆಯಿಂದ ಹೊರಟಿರುತ್ತಾರೆ. ಸಂಜೆ 7.15 ರಲ್ಲಿ ನಮ್ಮ ಗ್ರಾಮದ ಮಹದೇವನಾಯಕ ಎಂಬುವವರು ನಮ್ಮ ಮನೆಗೆ ಬಂದು ಕೆ.ಎಂ.ದೊಡ್ಡಿ ಹತ್ತಿರ ಕಾಗೇಪುರ ಬಳಿ ನನ್ನ ಪತಿಗೆ ಕಾರು ಅಪಘಾತಪಡಿಸಿ ಪೆಟ್ಟಾಗಿರುವ ಬಗ್ಗೆ ಕೆ.ಎಂ.ದೊಡ್ಡಿ ಅಸ್ಪತ್ರೆಗ ಕರೆದುಕೊಂಡು ಹೋಗಿರುವ ಬಗ್ಗೆ ತಿಳಿಸಿರುತ್ತಾರೆ. ಆಗ ನಾನು, ಚಾಸಾ-2, 4 ರಿಂದ 6 ಮತ್ತು 8 ರವರು ಕೆ.ಎಂ.ದೊಡ್ಡಿ ಅಸ್ಪತ್ರೆಗೆ ಹೋಗಿರುತ್ತೇವೆ. ನನ್ನ ಪತಿಯನ್ನು ನೋಡಲಾಗಿ ಅವರ ತಲೆಗೆ ಪೆಟ್ಟಾಗಿತ್ತು. ನಾನು ಚಾಸಾ-2 ರವರನ್ನು ಅಪಘಾತದ ಬಗ್ಗೆ ವಿಚಾರಿಸಲಾಗಿ ಬೆಂಗಳೂರಿಗೆ ಬಸ್ಸಿ ನಲ್ಲಿ ಹೋಗಿ ಕೆ.ಎಂ.ದೊಡ್ಡಿ ಹತ್ತಿರ ನಿಲ್ಲಿಸಿ ಮೂತ್ರ ವಿರ್ಸಜನೆ ಮಾಡಿ ಟೀ ಕುಡಿಯಲು ಹೋಗುತ್ತಿರುವಾಗ ಸಂಜೆ 6.30 ರ ಅವದಿಯಲ್ಲಿ ರಸ್ತೆ ದಾಟುತ್ತಿದ್ದಾಗ ಮಳವಳ್ಳಿ ಕಡೆಯಿಂದ ಬಂದ ಕಾರು ಅತೀ ವೇಗವಾಗಿ ಬಂದು ರಸ್ತೆ ದಾಟುತ್ತಿದ್ದ ನನ್ನ ಪತಿಗೆ ಡಿಕ್ಕಿಪಡಿಸಿರುವ ಬಗ್ಗೆ ತಿಳಿಸಿರುತ್ತಾರೆ. ತನ್ನ ಜೊತೆ ಚಾಸಾ-3 ಇದ್ದರು ಎಂದು ಚಾಸಾ-2 ತಿಳಿಸಿರುತ್ತಾರೆ. ಗಾಯಾಳುವನ್ನು ಮಾದೇಗೌಡ ಅಸ್ಪತ್ರೆಗೆ ಕರೆದುಕೊಂಡ ಹೋದ ಬಗ್ಗೆ ತಿಳಿಸಿರುತ್ತಾರೆ. ಅಪಘಾತ ಪಡಿಸಿದ ವ್ಯಕ್ತಿಯ ಹೆಸರನ್ನು ಹೇಳಿರುವುದಿಲ್ಲ.

ಮಾದೇಗೌಡ ಅಸ್ಪತ್ರೆಯಿಂದ ಮೈಸೂರಿನ ಜೆ ಎಸ್ ಎಸ್ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಮರು ದಿನ ಬೆಳಿಗ್ಗೆ 9.00 ಗಂಟೆಗೆ ನನ್ನ ಪತಿಯು ಮೃತರಾಗಿರುತ್ತಾರೆ.

2) ಅದೇ ದಿನ ಪೋಲೀಸರಿಗೆ ದೂರು ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಮೊದಲು ಅಪಘಾತವು ಕಾಗೇಪುರದಲ್ಲಿ ಅಗಿರುತ್ತದೆ ಎಂದು ಹೇಳಿದ್ದು, ನಂತರ ತಳಗವಾದಿ ಗ್ರಾಮ ಎಂದು ಹೇಳಿ ಮರು ಹೇಳಿಕೆ ನೀಡಿರುತ್ತೇನೆ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**

**ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ**

ಮದ್ದೂರು ಕಡೆಯಿಂದ ಮಳವಳ್ಳಿ ಕಡೆಗೆ ಕಾರು ಬರುತ್ತಿತ್ತು ಎಂದು ಚಾಸಾ-2 ರವರು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಕಾರಿನ ನೊಂದಣಿ ಸಂಖ್ಯೆ ಕೆಎ-52-ಎಂ-1720 ಅಗಿದ್ದು, ಅದರ ಚಾಲಕ ಮಹೇಶ್ ಎಂದು ಚಾಸಾ-2 ರವರು ನನಗೆ ಹೇಳಿದ್ದು ಅದರ ಪ್ರಕಾರ ನಿಪಿ-1 ರಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನೆನಪಿಲ್ಲದ ಕಾರಣ ಆ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.